ತಾವು ಗುರುತರವಾದಂಥ ಆಪಾದನೆಯನ್ನು ಮಾಡಿದ್ದೀರಿ. ಪತ್ರಕರ್ತರ ಮೇಲೆ ಕೇಸನ್ನು ದಾಖಲು ಮಾಡಿದ್ದೀರಿ ಎಂದು ತಾವು ಆಪಾದನೆ ಮಾಡಿದ್ದೀರಿ ಇದು ಗುರುತರವಾದುದು ಈ ರೀತಿ ಆದರೆ ಅದರ ಪಾವಿತ್ರ್ಯತೆ ಹೋಗುತ್ತದೆ.

(ಗೊಂದಲ)

ನೀವು ರಾಜಕೀಯ ಬೆರಸಿದರೆ ನಿಮ್ಮ ಆಪಾದನೆ ಇರತಕ್ಕಂಥ ಗಾಂಭೀರ್ಯತೆ ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ನಾವು ವರದಿ ತರಿಸಿ ಸಂಜೆಯೊಳಗೆ ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಪತ್ರಕರ್ತರ ಮೇಲೆ ಮೊಕದ್ದಮೆ ಹಾಕಿರತಕ್ಕದ್ದು ನಿಜ. ಅದನ್ನು ಹಾಕತಕ್ಕಂಥ ವಿಚಾರವಲ್ಲ.

ಉಪಾಧ್ಯಕ್ಷಿಣಿಯವರು : ಈಗ ತಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ. ಅದರ ಜೊತೆ ಯಾವ ರೆಕಾರ್ಡ್ಸ್ ಅನ್ನು ತಾವು ಲಗತ್ತಿಸಿಲ್ಲ. ಬರೀ ಒಂದು ಕಾಗದ ಮಾತ್ರ ಕೊಟ್ಟಿದ್ದೀರಿ. ರೆಕಾರ್ಡ್ ಇದೆ ಕಳುಹಿಸಿ. ಅದನ್ನು ಪರಿಶೀಲಿಸಿ ಅನಂತರ ನಾನು ತೀರ್ಮಾನಕ್ಕೆ ಬರುತ್ತೇನೆ.

ವಿಷಯ: ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ ತಮ್ಮಲ್ಲಿ ನಾನು ಮನವಿ ಮಾಡಿದ್ದೆ. ತಮ್ಮ ಕಾರ್ಯಾಲಯಕ್ಕೆ ಬಂದು ಮಾತನಾಡುತ್ತಿದ್ದೇನೆ ಇನ್ನೊಂದು ವಿಚಾರವನ್ನು ವಿದ್ಯಾ ಸಚಿವರ ಗಮನಕ್ಕೆ ತರುತ್ತೇನೆ. ಈ ಡಾ॥ ಸರೋಜಿನಿ ಮಹಿಷಿ ವರದಿ ಜಾರಿ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ನೀತಿ ಏನು? ಮತ್ತು ಹಂಪೆಯಲ್ಲಿ ಕನ್ನಡ ವಿಶ್ವವಿಧ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ತಮ್ಮ ನಿಲುವು ಎಂಬುದನ್ನು ಇದುವರೆಗೂ ಸ್ಪಷ್ಟಪಡಿಸಿಲ್ಲ. ಆದುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ. ಈ ಬಗ್ಗೆ ಸವಿಸ್ತಾರವಾಗಿ ಈ ಸದನದಲ್ಲಿ ಹೇಳಿಕೆಯನ್ನು ತಾವು ಕೊಡಬೇಕು. ಯಾವಾಗ ಹಂಪೆಯಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆ ಮಾಡುತ್ತೀರಿ? ಡಾ॥ ಸರೋಜಿನಿ ಮಹಿಷಿ ವರದಿಯನ್ನು ಯಾವಾಗ ಜಾರಿಗೆ ತರುತ್ತೀರಿ? ತಮ್ಮ ಸರ್ಕಾರದ ನೀತಿಗಳೇನು? ನಿಯಮಗಳೇನು? ಇದುವರೆಗೆ ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು? ಈ ಬಗ್ಗೆ ಸರ್ಕಾರದವರು ಹೇಳಿಕೆ ಕೊಡಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಈ ಪ್ರಶ್ನೆ ಎತ್ತಿದ್ದಾರೆ ಮಾನ್ಯ ಈಶ್ವರಪ್ಪನವರಿಗೆ ಇದು ರಾಜಕೀಯ ಆದರೆ ವಾಟಾಳ್ ನಾಗರಾಜ್‌ರವರಿಗೆ ಮತ್ತು ನಮಗೆ ಇದು ಜೀವನ ಪಣದ ಪ್ರಶ್ನೆ ನೀವು ದಯವಿಟ್ಟು ರಾಜಕೀಯ ತರಬೇಡಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಸದಸ್ಯರು ಬಹುಶಃ ತಿಳಿದುಕೊಂಡಿರಬಹುದು. ಕೊನೆ ದಿವಸ ಏನಾದರೂ ರಾಜಕೀಯ ಬಂಡವಾಳ ತಬ್ಬಿಕೊಂಡು ಬಾಚಿಕೊಂಡು ಹೋಗಿಬಿಡೋಣ ಎಂದು ಹೇಳಿದರೆ ಸಾಧ್ಯವಾಗುವುದಿಲ್ಲ. please don't make politics here. ರಾಜಕೀಯ ಬೆರೆಸಿ ಮಾತನಾಡುವ ತಮ್ಮ ಪ್ರವೃತ್ತಿ ಏನಿದೆ ಇದಕ್ಕೆ ಕಡಿವಾಣ ಹಾಕದೇ ಇದ್ದರೆ ತಮ್ಮ ವ್ಯಕ್ತಿತ್ವಕ್ಕೆ ಕುಂದು. ಮಾನ್ಯ ವಾಟಾಳ್ ನಾಗರಾಜ್‌ರವರು ಸರೋಜಿನಿ ಮಹಿಷಿ ವರದಿ ಬಗ್ಗೆ

ಹೇಳಿದ್ದಾರೆ. ಡಾ॥ ಸರೋಜಿನಿ ಮಹಿಷಿ ವರದಿ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿಯವರು ಈಗಾಗಲೇ ಪರಿಶೀಲಿಸಿ ಆ ಶಿಫಾರಸ್ಸುಗಳನ್ನು ಕ್ಯಾಬಿನೆಟ್ ಒಪ್ಪಿಕೊಂಡಿದೆ. ನಂತರ ಇದರ ಬಗ್ಗೆ ಸರ್ಕಾರದ ಆದೇಶ ಕೂಡಾ ನಾವು ಹೊರಡಿಸಿದ್ದೇವೆ. ಆದೇಶದ ನಕಲನ್ನು ತಮಗೆ ಕಳುಹಿಸುತ್ತೇನೆ. ಆದುದರಿಂದ ಅದನ್ನು ಅನುಷ್ಠಾನ ಮಾಡತಕ್ಕಂಥ ದೃಷ್ಟಿಯಲ್ಲಿ ಸರ್ಕಾರ ಎಲ್ಲಾ ರೀತಿಯ ಪ್ರಾಮಾಣಿಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಅದಕ್ಕೆ ಬೇರೆ ಬೇರೆ ಇಲಾಖೆಯಲ್ಲೂ ಕೂಡ ಇದರ ಬಗ್ಗೆ ಅನುಸರಿಸಬೇಕಾದಂಥ ಕೆಲವು ನಿಯಮಗಳು ಇವೆ ಅದನ್ನು ಕೂಡ ನಾವು ಮಾಡತಕ್ಕಂಥಾದ್ದು ದೃಷ್ಟಿಯಲ್ಲಿದೆ. ಎರಡನೆಯದಾಗಿ ಇದರ ಬಗ್ಗೆ ವಾಟಾಳ್ ನಾಗರಾಜ್‌ರವರನ್ನು ಮತ್ತು ವಿರೋಧಪಕ್ಷದ ನಾಯಕರನ್ನು ಈ ಸದನ ಮುಗಿದ ನಂತರ ಒಂದು ಸಭೆ ಕರೆಯುತ್ತೇನೆ. ಇದನ್ನು ಅನುಷ್ಠಾನ ಮಾಡಲಿಕ್ಕೆ ಇನ್ನೂ ಏನಾದರೂ ತೊಂದರೆ ಇದ್ದರೆ ಅವುಗಳ ಬಗ್ಗೆ ಚರ್ಚಿಸುತ್ತೇನೆ. ಅನೇಕ ಸಂಸ್ಥೆಗಳು ಇದನ್ನು ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತವೆ. ಆದುದರಿಂದ ಅದನ್ನು ಇನ್ನೂ ಬಲಪಡಿಸಲಿಕ್ಕೆ ತಮ್ಮ ಸಲಹೆ ಕೂಡ ಕೇಳಿ ನಾವು ಎಲ್ಲಾ ಪ್ರಯತ್ನವನ್ನೂ ಮಾಡುತ್ತೇವೆ. ಇದನ್ನು ಹಂಪೆಯಲ್ಲಿ ಆಗತಕ್ಕ ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಈಗಾಗಲೇ ತಮ್ಮಲ್ಲರ ಒಪ್ಪಿಗೆ ಪಡೆದು ಮಸೂದೆ ಮಂಜೂರಾಗಿದೆ. ಇದರ ಬಗ್ಗೆ ನಾವು ಈ ವರ್ಷದಲ್ಲಿಯೇ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಈ ವರ್ಷವೇ ಈ ವಿಶ್ವವಿದ್ಯಾಲಯದ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕೆಂದು ನಾವು ಈಗಾಗಲೇ ಡಾ॥ ಚಂದ್ರಶೇಖರ ಕಂಬಾರ್ ಅವರನ್ನು ವಿಶೇಷಾಧಿಕಾರಿಗಳನ್ನಾಗಿ ನೇಮಿಸಲು ನಿರ್ಣಯ ತೆಗೆದುಕೊಂಡಿದ್ದೇವೆ. ಯಾಕೆಂದರೆ ಐ.ಏ.ಎಫ್. ಅಧಿಕಾರಿಗಳು ಅಥವಾ ಇನ್ನೊಬ್ಬರಿಗೆ ಹೆಚ್ಚು ಇದರ ಬಗ್ಗೆ ಆಸಕ್ತಿ ಇರುವುದಿಲ್ಲ. ಕಾರ್ಯಕ್ರಮ ನಡೆಯುವುದಿಲ್ಲ ಎಂದು ತಾವು ಹೇಳುತ್ತೀರಿ. ಆದುದರಿಂದ ಅದಕ್ಕೆ ಸಂಬಂಧಪಟ್ಟ ಮತ್ತು ಕನ್ನಡ ನುಡಿಯ ಕನ್ನಡ ಸಂಸ್ಕೃತಿಯ ಮತ್ತು ಕನ್ನಡದ ಸಮಗ್ರ ಅಭಿವೃದ್ಧಿಯ ಬಗ್ಗೆ ಆಸಕ್ತಿಯುಳ್ಳವಂತವರಾದ ಡಾ॥ ಚಂದ್ರಶೇಖರ ಕಂಬಾರ್ ರವರು ವಿಶೇಷ ಅಧಿಕಾರಿಯನ್ನಾಗಿ ನೇಮಕ ಮಾಡಬೇಕೆಂದು ಸರ್ಕಾರ ನಿರ್ಣಯ ತೆಗೆದು ಕೊಂಡು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅವರ ಸೇವೆಯನ್ನು ಸರ್ಕಾರಕ್ಕೆ ಎರವು ಕೊಡಬೇಕೆಂದು ಈಗಾಗಲೇ ಬರೆದಿದ್ದೇವೆ. ಬಹುಶಃ ಬೆಂಗಳೂರು ವಿಶ್ವವಿದ್ಯಾನಲಯದವರು ನಮಗೆ ಅವರ ಸೇವೆಯನ್ನು ಕೊಡುವವರಿದ್ದಾರೆ ಕೊಟ್ಟ ಕೂಡಲೇ ನಾವು ಕೆಲವೇ ದಿವಸಗಳಲ್ಲಿ ಕಾರ್ಯೋನ್ಮುಖರಾಗುತ್ತೇವೆ. ಅವರು ಎಲ್ಲಾ ರೂಪರೇಷೆಗಳನ್ನು ತಯಾರು ಮಾಡಿದಮೇಲೆ ಅವರಿಗೆ ವಿಶ್ವವಿದ್ಯಾನಿಲಯದ ಪದಾಧಿಕಾರಿಗಳನ್ನು ಕುಲಪತಿಗಳನ್ನು ಇನ್ನಿತರರನ್ನು ನೇಮಕ ಮಾಡುವ ವಿಷಯದಲ್ಲಿ ನಾವು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಇದಕ್ಕೆ ಬಹಳ ಸಮಯ ಹಿಡಿಯುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಎಷ್ಟು ಹಣವನ್ನು ಇದಕ್ಕಾಗಿ ಇಟ್ಟಿದ್ದೀರಿ?

ಉಪಾಧ್ಯಕ್ಷಿಣಿಯವರು : ದಯಮಾಡಿ ತಾವು ಅವರ ಹತ್ತಿರ ಹೋಗಿ ಮಾತನಾಡಿ.

ಶ್ರೀ ಎಂ. ವೀರಪ್ಪಮೊಯಿಲಿ : ಒಂದು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ ಅದು ಖರ್ಚಾದರೆ ಇನ್ನು ಹೆಚ್ಚು ಕೊಡತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ.